ಆಕರ್ಷಕವಾಗಿ ಕಾಣುತ್ತಿಲ್ಲವೆನಿಸುತ್ತದೆ. ವಿಮರ್ಶೆಯೇ ಎಂದಲ್ಲ, ಕತೆ, ಕವಿತೆಗಳನ್ನು ಬರೆಯುವವರೂ ಸಹ ಸಾಹಿತ್ಯಕ್ಕೆ ಅತ್ಯಗತ್ಯವಾದ ಓದು ಮತ್ತು ಅಭ್ಯಾಸಕ್ಕೆ ಬೇಕಾದ ಶ್ರಮವನ್ನು ಗಣಿಸುವುದಿಲ್ಲ.

ವಿಮರ್ಶಕರು ಪುಸ್ತಕದ 'ಬೆಲೆ ಕಟ್ಟುತ್ತಾರೆ', 'ಮೌಲ್ಯಮಾಪನ ಮಾಡುತ್ತಾರೆ' ಎಂಬ ಸರಳೀಕೃತ ಗ್ರಹಿಕೆಗಳಿಂದ ಅಧ್ಯಯನದ ಬಲವಿಲ್ಲದ ಹೊಸ ವಿಮರ್ಶಕರು ತಮಗೆ ಸಲ್ಲದ ಮಹತ್ವವನ್ನು ಆರೋಪಿಸಿಕೊಂಡು ಪುಸ್ತಕಗಳ ಬಗ್ಗೆ ಭೋಳೆಯಾಗಿ ಬರೆಯತೊಡಗಿದ್ದರೆ ಅಂಥದೇ ಗ್ರಹಿಕೆಯಿರುವ ಲೇಖಕರು ವಿಮರ್ಶಕರೆಂದರೆ ಎದುರಾಳಿಗಳೆಂದು ಭಾವಿಸಿ ಉಪೇಕ್ಷೆಯಿಂದ ಮಾತನಾಡುತ್ತಾರೆ.

- **ಕೊನೆಯದಾಗಿ, ಒಬ್ಬ ಲೇಖಕ ಯಾವಾಗ ಸಾಯುತ್ತಾನೆ? ಅದನ್ನೇ ಇನ್ನೊಂದು ರೀತಿಯಲ್ಲಿ ಕೇಳುವುದಾದರೆ ಯಾವುದು ಒಬ್ಬ ಕತೆಗಾರನಿಗೆ ಜೀವಂತವಾಗಿರುವುದು ಅತ್ಯವಶ್ಯಕ ಸಂಗತಿ?**

ಪಿ. ಲಂಕೇಶ್ ಒಂದು ಕಡೆ ಹೇಳುತ್ತಾರೆ, 'ನಿರ್ಲಕ್ಷ್ಯವೇ ಕತೆಗಾರನಿಗೆ ಮೃತ್ಯು' ಅಂತ. ಎಂದರೆ ಹೊಗಳಿಸಿಕೊಳ್ಳುತ್ತ ಇರಬೇಕು ಅಂತಲ್ಲ. ಜಗಳದಲ್ಲೋ ಟೀಕೆಯಲ್ಲೋ ಒಟ್ಟಿನಲ್ಲಿ ಒಬ್ಬ ಬರಹಗಾರ ಚರ್ಚೆಯಲ್ಲಿದ್ದು ರೆಲವೆಂಟ್ ಆಗಿರಬೇಕು. ಹಾಗೆಯೇ ಇಂಟಲೆಕ್ಚ್ಯುಲ್ ಸಫರಿಂಗ್ ಅನ್ನುವುದು ಒಬ್ಬ ಬರಹಗಾರನಿಗೆ ಮುಖ್ಯ ಅಂತ ಅನಂತಮೂರ್ತಿ ಹೇಳುತ್ತಿದ್ದರು. ಇವೆರಡೂ ಇದ್ದಾಗ ಲೇಖಕ ಜೀವಂತವಾಗಿರುತ್ತಾನೆ. ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ದೇವನೂರ ಮಹಾದೇವರ ಒಂದು ಹೇಳಿಕೆಯನ್ನು ಓದಿದ್ದೆ. ಆ ವರ್ಷದ ಅತ್ಯಂತ ಖೇದಕರ ನೋವಿನ ಸಂಗತಿ ಯಾವುದು ಅಂತ ಒಂದು ಪತ್ರಿಕೆಯವರು ಕೇಳಿದಾಗ, ಇಥಿಯೋಪಿಯಾದ ಬರಗಾಲ ತನಗೆ ತೀವ್ರವಾದ ನೋವಿನ ಸಂಗತಿ ಎಂದಿದ್ದರು. ಇಲ್ಲಿಯ ಒಬ್ಬ ಮನುಷ್ಯ ಇಥಿಯೋಪಿಯಾದ ನೋವಿಗೆ ಮಿಡಿಯುವ ಗುಣ ಇದೆಯಲ್ಲ ಇದು ಇಂಟೆಲೆಕ್ಚ್ಯುಲ್ ಸಫರಿಂಗ್. ಅವರ ಭಾವಜಗತ್ತಿನಲ್ಲಿ ಇಥಿಯೋಪಿಯಾದ ನೋವಿಗೂ ಒಂದು ಸ್ಥಾನವಿದೆ. ನೋಡಿ, ಮಧ್ಯಪ್ರಾಚ್ಯದಲ್ಲಿ ಯುದ್ಧದಿಂದ ಆಗಿರುವ ಅನಾಹುತ ಎಷ್ಟು ಭೀಕರವಾದ್ದು. ಏನೂ ನಡೆದೇ ಇಲ್ಲ ಅನ್ನುವ ಹಾಗೆ ನಾವು ಪತ್ರಿಕೆಯ ಪುಟ ತಿರುವುತ್ತೇವೆ. ನಾನು ಇತ್ತೀಚೆಗೆ ಅಮೆರಿಕಾದ ಫೋಟೋ ಜರ್ನಲಿಸ್ಟ್ ಒಬ್ಬರನ್ನು ಭೇಟಿಯಾಗಿದ್ದೆ. ಅವರು ಹೇಳುತ್ತಿದ್ದರು – ಜಗತ್ತಿನ ಮಾಧ್ಯಮ ಈವತ್ತು ಯುದ್ಧವನ್ನ ನಮ್ಮ ಕಣ್ಣೆನಿಂದ ಮುಚ್ಚಿಟ್ಟಿದೆ. ನೆಲದ ಮೇಲಿರುವ ಯುದ್ಧದ ಭೀಕರತೆಯು ನಮಗೆಲ್ಲೂ ಕಾಣುವುದಕ್ಕೇ ಸಿಗುವುದಿಲ್ಲ. ಯುದ್ಧವೂ ಲೇಸರ್ ಶೋ ಥರ ಕಾಣುವ ಹಾಗೆ ಮಾರ್ಪಾಟಾಗಿದೆ. ಬಂಡವಾಳಶಾಹಿ ಜಗತ್ತಿಗೆ ಈ ಕರಾಳ ಚಿತ್ರವನ್ನು ನಾವು ನೋಡುವುದು ಬೇಡವಾಗಿದೆ. ಯಾಕೆಂದರೆ ಜನರೊಳಗೆ ಕ್ಷೇಮಭಾವ ಇರುವಾಗ ಉದಾರಿಯಾಗಿರುತ್ತಾರೆ. ಜನರು ಎಂಥದ್ದೇ ಪರಿಸ್ಥಿತಿಯಲ್ಲೂ ಖರ್ಚು ಮಾಡುತ್ತಿರಬೇಕು ಎಂಬುದೇ ಬಂಡವಾಳಶಾಹಿಯ ಮೂಲಮಂತ್ರ. ಹೀಗಿರುವಾಗ, ಮಹಾದೇವರ ಆ ಮಾತುಗಳು ಈವತ್ತಿಗೂ ನನ್ನ ತಟ್ಟುತ್ತವೆ. ಎಲ್ಲಿಯದೋ ನೋವು, ಯಾವುದೋ ಬರಗಾಲ, ಅದಕ್ಕೆ ಸ್ಪಂದಿಸುವುದು ಎಷ್ಟು ಮುಖ್ಯವೆಂದೆನಿಸುತ್ತದೆ. ಇಲ್ಲಿಯೂ ಪ್ರಾಮಾಣಿಕತೆ ಮುಖ್ಯ. ತೋರುಗಾಣಿಕೆಯಲ್ಲ.

ನನ್ನ ಪ್ರಶ್ನೆಗಳಿಗೆ ಅವರ ಉತ್ತರ ಎನ್ನುವುದಕ್ಕಿಂತ, ಅವರ ಮಾತಿನ ಲಹರಿಗೆ ನನ್ನ ಪ್ರಶ್ನೆಗಳು ಹೇಗೋ ಹೊಂದಿಕೊಳ್ಳುತ್ತ, ಅದಕ್ಕೂ ಸ್ಪಂದಿಸುತ್ತ, ಸೃಜನಶೀಲತೆಗೆ ಸಂಬಂಧಪಟ್ಟ ಅನೇಕ ಸಂಗತಿಗಳು ತೆರೆದುಕೊಳ್ಳುತ್ತ ಹೋದವು. ಅದು ತೆರೆದುಕೊಂಡಷ್ಟೂ ನಿಗೂಢವಾಗುವ ಚಮತ್ಕಾರವೂ ಹೌದು. ವಿವೇಕರೊಂದಿಗೆ ಮಾತುಕತೆಯನ್ನು ಮುಗಿಸಿಕೊಂಡು ಹೊರಬರುವಾಗ, ಅವರ ಮುಂದಿನ ಕೃತಿಗಳ ಬಗೆಗಿನ ಆಕರ್ಷಣೆಯೂ ಹೆಚ್ಚಿತ್ತು.

✿